## ಬಂಡೀಪುರ ಹುಲಿ ಮೀಸಲು: ಕೃಪಾಕರ್ ಸೇನಾನಿ ಕಂಡಂತೆ



"ಬಂಡೀಪುರ, ನಾಗರಹೊಳೆ, ಮಧುಮಲೈ, ಸತ್ಯಮಂಗಲ, ವಯನಾಡು, ಬಿಆರ್ ಹಿಲ್ಸ್, ಮಲೆಮಾದೇಶ್ವರ ಬೆಟ್ಟ, ಹೀಗೆ ಒಂದಕ್ಕೊಂದು ಪರಸ್ಪರ ಕೊಂಡಿಯಾಗಿರುವ ಕಾಡುಗಳ ಪ್ರದೇಶ ನಮ್ಮ ದೇಶದಲ್ಲಿ ಬೇರೆ ಕಡೆ ಇಲ್ಲ. ಕಾಡುಪ್ರಾಣಿಗಳು ಒಂದು ವಲಯದಿಂದ ಇನ್ನೊಂದು ಕಡೆಗೆ ಸುಲಭವಾಗಿ ಪ್ರಸರಣ ಆಗಬಹುದು ಇಲ್ಲಿ. ಹುಲಿಯನ್ನು ನಾವು ನಮ್ಮ ಮಕ್ಕಳು ನೋಡಿದ್ದೀವಿ, ಆದರೆ ಮುಂದಿನ ಪೀಳಿಗೆಯವರು, ಒಂದಿನ್ನೂರು ವರ್ಷಗಳ ನಂತರದವರು ನೋಡಬೇಕು ಎಂದರೆ ವನ್ಯಪ್ರಾಣಿಗಳ ಜೀವನಚಕ್ರ ಮುಂದುವರೆಯುವ ರೀತಿಯಲ್ಲಿ ಏನು ಆಲೋಚನೆ ಮಾಡಿದ್ದೀವಿ? ಉದಾಹರಣೆಗೆ ಬಂಡೀಪುರದಲ್ಲಿ ಹುಲಿ ಸಂತತಿ ಮುಂದುವರೆಯಲು ಕನಿಷ್ಠ ಎಷ್ಟು ಬ್ರೀಡಿಂಗ್ ಪೇರ್ ಗಳು ಇರಬೇಕು? ನಮಗಿರುವ ಸಾವಿರಾರು ಕಾಯಿಲೆಗಳಲ್ಲಿ ಯಾವುದೋ ಒಂದು ನಮ್ಮ ಸಂಪರ್ಕದಿಂದ ಅವುಗಳಿಗೆ ತಗುಲಿತು, ಒಂದು ಕಡೆಯ ಒಂದು ನಲವತ್ತು ಐವತ್ತು ಪ್ರಾಣಿಗಳು ಸತ್ತು ಹೋದವು ಅಂದುಕೊಳ್ಳಿ, ಆಗ ಸದೃಢವಾದ ಪ್ರಾಣಿಗಳು ಇನ್ನೊಂದು ಕಡೆಯಿಂದ ಸುಲಭವಾಗಿ ಪ್ರಸರಣ ಆಗುವಂತಿರಬೇಕು. ಪರಸ್ಪರ ಕೊಂಡಿಯಾಗಿರುವ ಕಾಡುಗಳ ಮಧ್ಯ ಹೀಗೆ ರಸ್ತೆಗಳನ್ನು ನಿರ್ಮಿಸಿದರೆ, ಪ್ರತೀ ವಲಯವೂ ಒಂದೊಂದು ದ್ವೀಪ ಆಗಿಬಿಡುತ್ತವೆ. ಪ್ರಾಣಿಗಳ ಸುಲಭ, ಸಹಜ ಪ್ರಸರಣ ಆಗೋದಕ್ಕೆ ತಡೆಯಾಗುತ್ತೆ. ಬೇರೆ ಎಲ್ಲ ಅಭಯಾರಣ್ಯಗಳು ದ್ವೀಪಗಳ ಹಾಗಿವೆ. ಹೀಗೆ ಒಂದಕ್ಕೊಂದು ಕೊಂಡಿಯಾಗಿರುವ ವನ್ಯಜೀವಿ ವಲಯ ಇದೊಂದೇ. ಇಂತಹ ಜೀವವಲಯವನ್ನು ಆದಿರುವ ಹಾಗೆಯೇ ಬಿಟ್ಟುಬಿಡಬೇಕು. ಕೋಟ್ಯಂತರ ವರ್ಷ ತೆಗೆದುಕೊಂಡು ಸೃಷ್ಟಿಯಾದ ಇಂತಹ ಜೀವವಲಯವನ್ನು ಮಾನವ ಹಸ್ತಕ್ಷೇಪದಿಂದ ದೂರ ಇಡಬೇಕು."

ಮುಂದುವರೆಸುವಂತೆ ಮಧ್ಯಂತರ ಆಜ್ಞೆ ನೀಡಿತು. ಅದರಂತೆ ಜುಲೈ 2009ರಿಂದ ನಿಷೇಧ ಜಾರಿಯಲ್ಲಿದೆ. ಕೇರಳ ಈ ಆಜ್ಞೆಯನ್ನು ಪ್ರಶ್ನಿಸಿ, ಸಾವಿರಾರು ಪ್ರಯಾಣಿಕರಿಗೆ ಈ ಸಂಚಾರ ನಿಷೇಧದಿಂದ ತೊಂದರೆಯಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತು.

ರಾತ್ರಿ ಸಂಚಾರವನ್ನು ನಿರ್ಬಂಧಿಸಿದ ನಂತರ ಹೀಗೆ ಅಪಘಾತಕ್ಕೀಡಾಗಿ ಸಾಯುವ ವನ್ಯಪ್ರಾಣಿಗಳ ಸಂಖ್ಯೆ ಗಣನೀಯವಾಗಿ ಇಳಿಯಿತು. 2010ರಿಂದ 2018ರ ನಡುವಣ ಈ ಹತ್ತು ವರ್ಷದಲ್ಲಿ ಅಫಘಾತಕ್ಕೀಡಾದ ಪ್ರಾಣಿಗಳ ಸಂಖ್ಯೆ 34 ಮತ್ತು ಇವು ಕೂಡ ರಾತ್ರಿ ಜರುಗಿದ್ದಲ್ಲ ಎಂದು ಬಂಡೀಪುರ ಅರಣ್ಯ ಇಲಾಖೆ ಮೂಲಗಳು ಹೇಳುತ್ತವೆ. ತದನಂತರ ತಮಿಳುನಾಡು ಕೂಡ ಮಧುಮಲೈ ಹುಲಿ ಮೀಸಲಿನ ಮೂಲಕ ಹಾದುಹೋಗುವ ರಸ್ತೆಯನ್ನು ರಾತ್ರಿ ಸಂಚಾರಕ್ಕೆ ಮುಚ್ಚಿತು. ಈ ಎರಡನ್ನು ನೋಡಿ ಪ್ರೇರಣೆಗೊಂಡ ಗುಜರಾತ್ ಸರಕಾರ, ಗಿರ್ ರಾಷ್ಟ್ರೀಯ ಉದ್ಯಾನದ ಮೂಲಕ ಹಾದುಹೋಗುವ ರಸ್ತೆಯನ್ನು ರಾತ್ರಿ ಸಂಚಾರಕ್ಕೆ ನಿಷೇಧಿಸಿದೆ.

ಚಿಕ್ಕ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ ಓಡಾಡಿದರೂ ಅವುಗಳನ್ನು ತುಸುಮಟ್ಟಿಗೆ ಸಹಿಸುವ ಆನೆಗಳು ದೊಡ್ಡ ವಾಹನಗಳಿಗೆ ಮತ್ತು ಚಾಲಕರ ಪ್ರತಿಕ್ರಿಯೆಗೆ ವಿಪರೀತ ಸೆನ್ಸಿಟಿವ್ ಆಗಿರುತ್ತವೆ ಎಂದು ಈ ಕುರಿತು ಅಧ್ಯಯನ ಮಾಡಿರುವ ಟಿಎನ್ನಿ ವಿದ್ಯಾ ಮತ್ತು ವಿವೇಕ್ ತುಪ್ಪಿಲ್ ಹೇಳುತ್ತಾರೆ.

### ಕೇರಳದ ಅಪಸ್ವರ ಏಕೆ?

ಕೇರಳ ಮತ್ತು ಕರ್ನಾಟಕದ ಮಧ್ಯೆ ಓಡಾಡುವ ಸಾವಿರಾರು ಪ್ರಯಾಣಿಕರಿಗೆ ರಾತ್ರಿ ಸಂಚಾರ ನಿಷೇಧದಿಂದಾಗಿ ಭಾರೀ ಕಷ್ಟವಾಗಿದೆ, ಅವರು ಗಡಿಯ ಬಳಿ ರಾತ್ರಿಯಿಡೀ ಕಾಯಬೇಕಾಗುತ್ತದೆ ಎನ್ನುವುದು ಕೇರಳದ ಹುಯಿಲು. ಕೇರಳ ಹೀಗೆ ತಗಾದೆ ಎಬ್ಬಿಸಿರುವುದು ಇದೇ ಮೊದಲೇನಲ್ಲ. ಹಾಗೆಂದು ಅಲ್ಲಿಗೆ ಪರ್ಯಾಯ ಮಾರ್ಗವಿಲ್ಲ ಎಂದೇನಿಲ್ಲ. ಹುಣಸೂರು, ಗೋಣಿಕೊಪ್ಪಲು, ಕುಟ್ಟ, ಮಾನಂದವಾಡಿ ಮೂಲಕ ಸಾಗಿ, ಕಲ್ಪೆಟ್ಟದಲ್ಲಿ ಮತ್ತೆ ರಾಷ್ಟ್ರೀಯ ಹೆದ್ದಾರಿಗೆ ಸೇರುವ ಪರ್ಯಾಯ ಮಾರ್ಗವಿದೆ. ಆ ದಾರಿ ಬಹಳ ದೂರವೂ ಏನಲ್ಲ, 32 ಕಿ.ಮೀ. ಹೆಚ್ಚು ಅಷ್ಟೆ. ಕಾಡುಪ್ರಾಣಿಗಳ ಜೀವಕ್ಕೆ ಹೋಲಿಸಿದರೆ ಈ 32 ಕಿ.ಮೀ. ಹೆಚ್ಚುವರಿ ದೂರ ತೀರಾ ನಗಣ್ಯ. ಆದರೆ ಕೇರಳಕ್ಕೆ ಇದು ಎಷ್ಟು ಹೊರೆಯಾಯಿತು ಎಂದರೆ 2009ರಿಂದಲೂ ತಗಾದೆ ಎಬ್ಬಿಸುತ್ತಲೇ ಬಂದಿದೆ.

ಕೇರಳದ ಆಗಿನ ಮುಖ್ಯಮಂತ್ರಿ ಉಮ್ಮನ್ ಚಾಂಡಿಯವರು 2012ರಲ್ಲಿ

ಚಿತ್ರ: ಎಚ್.ಸತೀಶ್

